# ನಾಗ ಚೈತನ್ಯಗೆ ಅಮೀರ್ ಮೆಚ್ಚುಗೆ





ನಾಗ ಚೈತನ್ಯ ಹಾಗೂ ಸಮಂತಾ ಅಕ್ಕಿನೇನಿ ದಾಂಪತ್ಯದಲ್ಲಿ ಬಿರುಕು ಮೂಡಿದೆ ಎನ್ನುವ ಸುದ್ದಿಯ ಸತ್ಯಾಸತ್ಯತೆಯನ್ನು ನೆಟ್ಟಿಗರು ಪರಿಶೀಲಿಸುತ್ತಿರುವ ಹೊತ್ತಿಗೇ ಅಪರೂಪದ ಅತಿಥಿಯೊಬ್ಬರು ಅಕ್ಕಿನೇನಿ ಮನೆಗೆ ಭೇಟಿ ನೀಡಿದ್ದು ವಿಶೇಷ. ಆ ಅತಿಥಿ ಬಾಲಿವುಡ್ ನಟ ಅಮೀರ್ ಖಾನ್.

'ಲಾಲ್ ಸಿಂಗ್ ಛಡ್ಡಾ' ಹಿಂದಿ ಸಿನಿಮಾದ ಸಣ್ಣ ಪಾತ್ರವೊಂದಕ್ಕೆ ವಿಜಯ್ ಸೇತುಪತಿ ಬೆನ್ನುಮಾಡಿದ ಮೇಲೆ, ನಾಗ ಚೈತನ್ಯ ಅವರಿಂದ ಪಾತ್ರ ಮಾಡಿಸಿ ಖುಷಿಪಟ್ಟವರು ಅಮೀರ್. ಅವರು ಹೈದರಾಬಾದ್‌ಗೆ ಭೇಟಿ ನೀಡಿದರು. 'ಲವ್ ಸ್ಟೋರಿ' ಚಿತ್ರದ ಪ್ರಚಾರದ ಉದ್ದೇಶದಿಂದ ನಡೆದ ಸಮಾರಂಭವೊಂದಲ್ಲಿ ಅಕ್ಕಿನೇನಿ ಕುಟುಂಬವಿತ್ತು. ಅಲ್ಲಿ ಅತಿಥಿಯಾಗಿ ಹಾಜರಾದ ಅಮೀರ್, ಅಲ್ಲಿದ್ದ ಎಲ್ಲರನ್ನೂ ಮುಕ್ತಕಂಠದಿಂದ ಶ್ಲಾಘಿಸಿದರು.

'ನಾಗ ಚೈತನ್ಯ ಮಾತು ಮೃದು. ನಡವಳಿಕೆಯಲ್ಲಿ ತಟವಟ ಇಲ್ಲ. ಅವರ ತಂದೆ ನಾಗಾರ್ಜುನ ಅಕ್ಕಿನೇನಿ ಆ ರೀತಿ ಬೆಳೆಸಿದ್ದಾರೆ. ಕೆಲಸದಲ್ಲಿಯೂ ಅವರಿಗೆ ಶ್ರದ್ಧೆ ಇದೆ. ಇಂತಹವರ ಸಂಖ್ಯೆ ಸಿನಿಮಾದಲ್ಲಿ ಹೆಚ್ಚಾಗಬೇಕು' ಎಂದು ಅಮೀರ್ ಹೊಗಳಿದ್ದನ್ನು ಕೇಳಿ ನಾಗ ಚೈತನ್ಯ ಸಂಕೋಚದ ಮುದ್ದೆಯಂತೆ ಆಗಿದ್ದರಂತೆ.

ಶೇಖರ್ ಕಮ್ಮುಲ ನಿರ್ದೇಶನದ 'ಲವ್ ಸ್ಟೋರಿ' ಚಿತ್ರದಲ್ಲಿ ನಾಗ ಚೈತನ್ಯ ಅವರಿಗೆ ಸಾಯಿ ಪಲ್ಲವಿ ಜೋಡಿಯಾಗಿ ನಟಿಸಿದ್ದಾರೆ.

ಶೇಖರ್ ಕಮ್ಮುಲ ನವಿರಾದ ಪ್ರೇಮಕಥೆಯನ್ನು ಒಪ್ಪಿತ ಡ್ರಾಮಾ ಧಾಟಿಯಲ್ಲಿ ಹೇಳುವುದರಲ್ಲಿ ನಿಸ್ಸೀಮರು. ಕಳೆದ ವರ್ಷ ಏಪ್ರಿಲ್‌ನಲ್ಲೇ ಈ ಸಿನಿಮಾ ತೆರೆಕಾಣಬೇಕಿತ್ತು. ಕೋವಿಡ್ ಕಾರಣದಿಂದ ಈ ವರ್ಷಕ್ಕೆ ಮುಂದೂಡಲಾಯಿತು. ಕೋವಿಡ್ ಎರಡನೇ ಅಲೆ ಎದ್ದಿದ್ದರಿಂದ ಇಲ್ಲಿಯವರೆಗೆ ಅದಕ್ಕೆ ಬಿಡುಗಡೆಯ ಭಾಗ್ಯ ಸಿಕ್ಕಿರಲಿಲ್ಲ. ಸೆ. 24ಕ್ಕೆ ತೆರೆಕಂಡಿರುವ ಚಿತ್ರಕ್ಕೆ ಪ್ರೇಕ್ಷಕರಿಂದ ಯಾವ ರೀತಿಯ ಪ್ರತಿಕ್ರಿಯೆ ದೊರೆಯುವುದೋ ನೋಡಬೇಕಿದೆ. ■

# ಇಶಾ ನೆನಪಿಸಿಕೊಂಡ ಸರಳ ಬಾಲ್ಯ



ಕೆಲವು ತಾರಾ ವರ್ಚಸ್ಸಿನ ಪೋಷಕರಿಗೆ ತಮ್ಮ ಮಕ್ಕಳಿಗೆ ಜನರ ಕಷ್ಟಗಳು ಅರಿವಿಗೆ ಬರಲಿ ಎಂಬ ಭಾವನೆ ಇರುತ್ತದೆ. ತೆಲುಗಿನ ಜನಪ್ರಿಯ ಚಿತ್ರ ನಿರ್ದೇಶಕ ಮುರುಗದಾಸ್ ತಮ್ಮ ಮಗನಿಗೆ ತುಂಬಿ ತುಳುಕುತ್ತಿದ್ದ ಬಸ್ ಅನ್ನು ಪ್ರವಾಸಿತಾಣವನ್ನು ತೋರಿಸಿದಂತೆ ತೋರಿಸಿದ್ದನ್ನು ಒಮ್ಮೆ ಬರೆದುಕೊಂಡಿದ್ದರು. ಈಗ ಇಶಾ ದೇವಲ್ ಕೂಡ ತಮ್ಮ ತಂದೆ ಧರ್ಮೇಂದ್ರ ಹಾಗೂ ತಾಯಿ ಹೇಮಾ ಮಾಲಿನಿ ತಮ್ಮನ್ನು ಬೆಳೆಸಿದ ರೀತಿಯನ್ನು ಮುಕ್ತವಾಗಿ ಹೇಳಿಕೊಂಡಿದ್ದಾರೆ.

'ನಾನು ಶಾಲೆಗೆ ಎಲ್ಲ ಮಕ್ಕಳಂತೆಯೇ ಹೋಗುತ್ತಿದ್ದೆ. ಆಟೊರಿಕ್ಷಾ ಪ್ರಯಾಣ ನನಗೆ ಸಹಜವೇ ಆಗಿತ್ತು. ಸಹಪಾಠಿಗಳೂ ನನ್ನನ್ನು ನಟ–ನಟಿಯರ ಮಗಳೆಂದು ಬೇರೆ ರೀತಿ ನೋಡುತ್ತಿರಲಿಲ್ಲ' ಎಂದು ಅವರು ತಮ್ಮ ಬದುಕಿನ ಹಳೆಯ ಪುಟವನ್ನು ತಿರುವಿ ಹಾಕಿದ್ದಾರೆ.

ಇಶಾಗೆ ನಟಿಯಾಗಬೇಕು ಎಂಬ ಬಯಕೆ ತೀರಾ ಚಿಕ್ಕ ವಯಸ್ಸಿನಲ್ಲಿ ಇರಲಿಲ್ಲವಂತೆ. ಓದಿನ ಜತೆಗೆ ಕ್ರೀಡಾ ಚಟುವಟಿಕೆಯಲ್ಲಿ ಅವರು ತೊಡಗಿಕೊಂಡಿದ್ದೇ ಹೆಚ್ಚು. ಆಗೆಲ್ಲ ಶಾಲೆಯಿಂದ ಬೇರೆ ಸ್ಥಳಗಳಿಗೆ ಟೂರ್ನಿಗೆಂದು ಹೊರಟಾಗ ಸಹಪಾಠಿಗಳ ಜತೆಗೆ ರೈಲಿನಲ್ಲೇ ಪ್ರಯಾಣ ಮಾಡುತ್ತಿದ್ದರು. ಎಲ್ಲ ಮಕ್ಕಳು ಯಾವ ವರ್ಗದ ಬೋಗಿಗಳಲ್ಲಿ ಪಯಣಿಸುತ್ತಿದ್ದರೋ ಇವರ ಸಂಚಾರವೂ ಅದರಲ್ಲೇ.

'ನನ್ನ ಮಕ್ಕಳಾದ ರಾಧ್ಯ, ಮಿರಾಯ ಇಬ್ಬರನ್ನೂ ಜನರ ಕಣ್ಣಿನಿಂದ ದೂರವಿಟ್ಟೇ ಬೆಳೆಸುತ್ತಿದ್ದೇನೆ. ಈಗ ಮೊಬೈಲ್, ಸಾಮಾಜಿಕ ಜಾಲತಾಣ ವ್ಯಾಪಕವಾಗಿರುವುದರಿಂದ ಸದಾ ನಮ್ಮ ಮನೆಯ ಹೊರಗೆ ಫೋಟೊಗ್ರಾಫರ್‌ಗಳು ಅಡ್ಡಾಡುತ್ತಿರುತ್ತಾರೆ. ಅವರು ನಮ್ಮ ಸಣ್ಣ ಪುಟ್ಟ ಚಲನೆಗಳನ್ನೆಲ್ಲ ಕ್ಯಾಮೆರಾದಲ್ಲಿ ಸೆರೆಹಿಡಿದು, ಜಗಜ್ಜಾಹೀರು ಮಾಡುವುದು ಒಂಥರಾ ಅನಿಸುತ್ತದೆ. ನನ್ನ ಮಕ್ಕಳಿಗೆ ಅದೊಂದು ವಿಶೇಷ ಬಳುವಳಿ ಎಂದು ಅನಿಸಕೂಡದೆನ್ನುವುದು ಕಾಳಜಿ' ಎಂಬ ಇಶಾ ಮಾತು ತೂಕದ್ದು. ತಮ್ಮ ತಂದೆ–ತಾಯಿ ತಮ್ಮನ್ನು ಸರಳವಾಗಿ ಬೆಳೆಸದೇ ಇದ್ದರೆ ಈ ರೀತಿ ಅನಿಸುತ್ತಿರಲಿಲ್ಲವೇನೋ ಎಂಬ ಪ್ರಶ್ನೆಯೊಂದಿಗೆ ಅವರು ತಮ್ಮ ನಾಸ್ಟಾಲ್ಜಿಕ್ ಮಾತನ್ನು ಮುಗಿಸಿದ್ದಾರೆ.

■ ವಿಶಾಖ ಎನ್.